ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ ಗುಲಬರ್ಗಾ

ಸಂ/ಕಂ/ಸಿಬ್ಬಂದಿ-1/85/2009-10 ದಿನಾಂಕ: 24-12-2009.

-: ಪ್ರ ಕ ಟ ಣೆ ಸಂಖ್ಯೆ : ೦೨ :-

ವಿಷಯ: ಗುಲಬರ್ಗಾ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳ ನೇರ ನೇಮಕಾತಿ ಪರಿಶೀಲನಾ ಪಟ್ಟಿ ಪ್ರಕಟಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಅಧಿಸೂಚನೆ ಸಂಖ್ಯೆ ಕಂಇ/299/ಬಿಎಸ್‌ಸಿ/2009 ದಿನಾಂಕ: 08.09.2009.

2. ಈ ಕಾರ್ಯಾಲಯದ ಅಧಿಸೂಚನೆ ಸಮ ಸಂಖ್ಯೆ ದಿನಾಂಕ: 30-11-2009.

---

ಗುಲಬರ್ಗಾ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಾಧಿಕಾರಿಗಳ ನೇರ ನೇಮಕಾತಿಗಾಗಿ ಈಗಾಗಲೇ ಉಲ್ಲೇಖಿತ ಪ್ರಕಟಣೆ ಮೂಲಕ (1:3) ಅನುಪಾತದಲ್ಲಿ ಪರಿಶೀಲನಾ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಅದರಂತೆ ಒಟ್ಟು 341 ಅಭ್ಯರ್ಥಿಗಳಲ್ಲಿ ಕೇವಲ ಸುಮಾರ 185 ಅಭ್ಯರ್ಥಿಗಳು ಮಾತ್ರ ಹಾಜರಾಗಿರುತ್ತಾರೆ. ಕಾರಣ ಇನ್ನಷ್ಟು ಅಭ್ಯರ್ಥಿಗಳ ಕೊರತೆಯಾಗಿರುತ್ತದೆ.

(1:3) ಅನುಪಾತದ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನು ಹೊರತುಪಡಿಸಿ ಇನ್ನಷ್ಟು ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಪರಿಶೀಲಿಸಲು ತೀರ್ಮಾನಿಸಲಾಗಿದೆ.

ಆದ್ದರಿಂದ (**155**) ಅಭ್ಯರ್ಥಿಗಳನ್ನು ಹೆಚ್ಚುವರಿ ಪರಿಶೀಲನಾ ಪಟ್ಟಿಯಲ್ಲಿ ಸೇರಿಸಲಾಗಿದೆ. ಹೆಚ್ಚುವರಿ ಪರಿಶೀಲನಾ ಪಟ್ಟಿಯಲ್ಲಿ ನೊಂದಣಿಯಾದ ಅಭ್ಯರ್ಥಿಗಳು ದಿನಾಂಕ:08-01-2010 ರಂದು ಬೆಳಿಗ್ಗೆ 11:00 ಗಂಟೆಗೆ ಗುಲಬರ್ಗಾ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಮೂಲ ದಾಖಲೆಗಳೊಂದಿಗೆ ಹಾಗೂ ಒಂದು ಸೆಟ್ ಝುರಾಕ್ಸ ಪ್ರತಿಗಳಡೊನೆ ಕಡ್ಡಾಯವಾಗಿ ಹಾಜರಿರಲು ಸೂಚಿಸಲಾಗಿದೆ. ಒಂದು ವೇಳೆ ಅಭ್ಯರ್ಥಿಗಳು ಮೂಲ ದಾಖಲೆಗಳ ಪರಿಶೀಲನಾ ಸಮಯದಲ್ಲಿ ಹಾಜರಾಗದೆ ಇದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ಆಯ್ಕೆ ಪ್ರಕ್ರಿಯೆಯಿಂದ ತೆಗೆದುಹಾಕಲಾಗುವುದು.

**ಅಂಗವಿಕಲ ಅಭ್ಯರ್ಥಿಗಳಿಗೆ ವಿಶೇಷ ಸೂಚನೆ:-**

ಸರ್ಕಾರದ ಅಧಿಸೂಚನೆ ಸಂಖ್ಯೆ: DPAR/52/SRR/99 ದಿನಾಂಕ:29-11-2002ರಲ್ಲಿ ಕಂದಾಯ ಇಲಾಖೆಯಲ್ಲಿ ಅಂಗವಿಕಲರಿಗೆ ನೀಡಬೇಕಾದ ಹುದ್ದೆಗಳನ್ನು ಗುರುತಿಸಿ ಆದೇಶ ಹೊರಡಿಸಿದ್ದು ಇದರಂತೆ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳನ್ನು ಕುಷ್ಠರೋಗದಿಂದ ಗುಣಮುಖರಾದ ಅಂಗವಿಕಲರು, ಶ್ರವಣದೋಷವುಳ್ಳ ಅಂಗವಿಕಲರು, ಮಾನಸಿಕ ಅಸ್ವಸ್ಥರಿಗೆ ನೀಡಲು ಗುರುತಿಸಲಾಗಿದೆ. ಅದರಂತೆ ಚಲನವಲನ ವೈಕಲ್ಯವಿರುವವರು, ದೃಷ್ಟಿಮಾಂದ್ಯ ಮತ್ತು ಬುದ್ಧಿಮಾಂದ್ಯ ಅಂಗವಿಕಲರಿಗೆ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳನ್ನು ಗುರುತಿಸಿಲ್ಲದ ಕಾರಣ ವೈಕಲ್ಯ ಹೊಂದಿರುವವರನ್ನು ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗೆ ಆಯ್ಕೆ ಮಾಡಲು ಅವಕಾಶವಿರುವುದಿಲ್ಲ.

**ಆದ್ದರಿಂದ ಕೇವಲ ಶ್ರವಣದೋಷವುಳ್ಳ, ಕುಷ್ಠರೋಗದಿಂದ ಗುಣಮುಖರದಲ್ಲಿ ಮತ್ತು ಮಾನಸಿಕ ಅಸ್ವಸ್ಥರಾದ ಅಂಗವಿಕಲ ಅಭ್ಯರ್ಥಿಗಳಾದಲ್ಲಿ ಮಾತ್ರ ಮೂಲ ದಾಖಲಾತಿಗಳ ಪರಿಶೀಲನಾ ಸಮಯಕ್ಕೆ ಹಾಜರಾಗತಕ್ಕದ್ದು.**

ಒಂದು ವೇಳೆ ಪರಿಶಿಲನೆ ನಡೆಯುವ ಸಮಯದಲ್ಲಿ ಅಭ್ಯರ್ಥಿಗಳು ಸಲ್ಲಿಸಿರುವ ದಾಖಲಾತಿಗಳು ಸುಳ್ಳು ಎಂದು ಕಂಡು ಬಂದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು ಹಾಗೂ ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.

ಅಪರ ಜಿಲ್ಲಾಧಿಕಾರಿಗಳು,
ಗುಲಬರ್ಗಾ